ದಿವಸದಲ್ಲಿ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದಾರೆ. ಇನ್ನೂ 30ನೇ ತಾರೀಖಿನವರೆಗೆ ಅಧಿವೇಶನವಿದೆ. Recordsನ್ನು seize ಮಾಡುತ್ತೇನೆಂದು ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು) ಯಾವುದೇ ಮುಲಾಜಿಲ್ಲದೆಯೆ ಆ ವರದಿಯ ಆಧಾರದ ಮೇಲೆ ತೀವ್ರತರವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಅವರು ಹೇಳಿದ್ದಾರೆ. ಕ್ರಮ ಕೈಗೊಂಡು ತಕ್ಷಣ ಸದನದ ಗಮನಕ್ಕೆ ತರುತ್ತೇವೆ. ದಯಮಾಡಿ ಸಹಕರಿಸಿ. ಈ ರೀತಿ ಎಳೆದುಕೊಂಡು ಹೋಗುವುದು ಬೇಡ. ನಾವೇನು ಅಧಿಕಾರಿಗಳ ಪರವಾಗಿಲ್ಲ. ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ಕರುಣಾಕರರೆಡ್ಡಿ: ಜಿಲ್ಲಾಧಿಕಾರಿಯವರಿಗೆ ಸೂಚನೆ ಕೊಟ್ಟು ತಕ್ಷಣವೇ ಆ recordsನ್ನು seize ಮಾಡುವುದಕ್ಕೆ ಹೇಳುತ್ತೇನೆ.

(ಈ ಹಂತದಲ್ಲಿ ಶ್ರೀ ಎಂ.ಟಿ. ಕೃಷ್ಣಪ್ಪ, ಶ್ರೀ ಕರಡಿಸಂಗಣ್ಣ, ಶ್ರೀ ಕೆ.ಎಂ. ಶಿವಲಿಂಗೇಗೌಡ, ಶ್ರೀ ವೆಂಕಟರಾವ್ ನಾಡಗೌಡ, ಮುಂತಾದ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು)

ಇ) ಚಿತ್ರಾವತಿ ನದಿಗೆ ಅಡ್ಡಲಾಗಿ ಪರಗೋಡು ಹತ್ತಿರ ಬ್ಯಾರೇಜ್ ನಿರ್ಮಿಸಿರುವ ಬಗ್ಗೆ.

ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ) ಚಿತ್ರಾವತಿ ನದಿಗೆ ಅಡ್ಡಲಾಗಿ ಪರಗೋಡು ಹತ್ತಿರ ಕುಡಿಯುವ ನೀರಿಗೆ ಬ್ಯಾರೇಜ್ ನಿರ್ಮಿಸಿದ್ದು, ಈ ಬ್ಯಾರೇಜ್ ಕರ್ನಾಟಕ ನಗರ ನೀರು ಸರಬರಾಜು ಮಂಡಳಿಗೆ ಒಳಪಟ್ಟಿರುತ್ತದೆ. ಈ ಬ್ಯಾರೇಜಿನ ಸುತ್ತಮುತ್ತ ತ್ಯಾಜ್ಯ ವಸ್ತುಗಳನ್ನು ಹಾಕಿ, ಸರಿಯಾಗಿ ನಿರ್ವಹಣೆ ಮಾಡದಿರುವುದರಿಂದ ಕುಡಿಯುವ ನೀರಿನ ಗುಣಮಟ್ಟ ಹದಗೆಟ್ಟಿರುವುದರ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಬಾಗೇಪಲ್ಲಿ ಗುಡಿಬಂಡೆ ಹಾಗೂ

ಮಾರ್ಗ ಮಧ್ಯದ 88 ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಮಾಡಲು ಚಿತ್ರಾವತಿ ನದಿಗೆ ಅಡ್ಡಲಾಗಿ ಪರಗೋಡು ಗ್ರಾಮದ ಬಳಿ ಅಂದಾಜು ರೂ. 956.18 ಲಕ್ಷಗಳ ವೆಚ್ಚದಲ್ಲಿ ಜಲಾಶಯ ನಿರ್ಮಿಸಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕೈಗೆತ್ತಿಕೊಳ್ಳಲು ಸರ್ಕಾರವು 11/2002 ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ. ಅದರಂತೆ ಈ ಯೋಜನೆಯನ್ನು ಮಂಡಳಿ ಕೈಗೆತ್ತಿಕೊಂಡು ಫೆಬ್ರವರಿ 2005ರಲ್ಲಿ ಪೂರ್ಣಗೊಳಿಸಿದೆ. ಇಂತಹ ಪೂರ್ಣಗೊಳಿಸಿದ ಯಾವುದೇ ಯೋಜನೆಗಳನ್ನು ನಿರ್ವಹಿಸಲು ಮಂಡಳಿಗೆ ಯಾವುದೇ ಅನುದಾನ ಒದಗಿಸಿರುವುದಿಲ್ಲ. ಆದ್ದರಿಂದ ಈ ಬ್ಯಾರೇಜ್ ನಿರ್ವಹಣೆಯನ್ನು ಸ್ಥಳೀಯ ಸಂಸ್ಥೆ ವಹಿಸಿಕೊಳ್ಳಲು ಸೂಕ್ತ ನಿರ್ದೇಶನ ನೀಡುವಂತೆ ಪೌರಾಡಳಿತ ನಿರ್ದೇಶನಾಲಯವನ್ನು ಹಾಗೂ ತತ್ಸಂಬಂಧವಾಗಿ ಒಂದು ಸಮಿತಿಯನ್ನು ರಚಿಸಲು ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ರವರನ್ನು ಸಹ ಮಂಡಳಿಯು ಕೋರಿರುತ್ತದೆ. ಈ ಬಗ್ಗೆ ಜಿಲ್ಲಾಧಿಕಾರಿಯವರು, ಚಿತ್ರಾವತಿ ಬ್ಯಾರೇಜ್ ನಿರ್ವಹಣೆ ಬಗ್ಗೆ ದಿನಾಂಕ: 24.12.2009 ರಂದು ಒಂದು ಸಭೆಯನ್ನು ಶಾಸಕರು ಬಾಗೇಪಲ್ಲಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾಪಂಚಾಯತ್, ಚಿಕ್ಕಬಳ್ಳಾಪುರ, ಮಂಡಳಿಯ ಅಧಿಕಾರಿಗಳು, ಬಾಗೇಪಲ್ಲಿ ಹಾಗೂ ಗುಡಿಬಂಡೆ ಪಟ್ಟಣಗಳ ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು ಮತ್ತು ಇನ್ನಿತರೆ ಚುನಾಯಿತ ಪ್ರತಿನಿಧಿಗಳನ್ನೊಳಗೊಂಡಂತೆ ಕರೆದು ಚಿತ್ರಾವತಿ ಬ್ಯಾರೇಜ್ ನಿರ್ವಹಣಾ ಉಸ್ತುವಾರಿ ಸಮಿತಿಯನ್ನು ಶಾಸಕರು ಬಾಗೇಪಲ್ಲಿ ಕ್ಷೇತ್ರ ಅವರ ಅಧ್ಯಕ್ಷತೆಯಲ್ಲಿ ರಚಿಸಿ ಈ ಕೆಳಕಂಡ ತೀರ್ಮಾನವನ್ನು ಕೈಗೊಂಡಿರುತ್ತದೆ.

(1) ಒಂದು ವಾರದೊಳಗೆ ಗಿಡಗಂಟಿಗಳು ಬೆಳೆದಿರುವುದನ್ನು ತೆಗೆದು ಕೆರೆಕಟ್ಟೆಯನ್ನು ಸ್ವಚ್ಛಗೊಳಿಸುವುದು.

(2) ಒಂದು ವಾರದೊಳಗೆ ಇದಕ್ಕೆ ಸಂಬಂಧಿಸಿದ ಅಧಿಕಾರಿಗಳ ಸಭೆಯನ್ನು ಕರೆದು ಕ್ರಮವಹಿಸುವುದು.

(3) ಒಂದು ಉಸ್ತುವಾರಿ ಸಮಿತಿ ರಚಿಸಿ ನಿರ್ವಹಣೆಯ ಜವಾಬ್ದಾರಿ ನೀಡಲು ನಿರ್ಧರಿಸಿದೆ.

(ಬಿ) ಈ ಕೂಡಲೆ ಸರ್ಕಾರ ಒಂದು ತೀರ್ಮಾನ ತೆಗೆದುಕೊಂಡಿದೆ. ಚಿತ್ರಾವತಿ ಬ್ಯಾರೇಜ್‌ನ ನಿರ್ವಹಣ ಜವಾಬ್ದಾರಿಯನ್ನು ಕರ್ನಾಟಕ ನಗರ ನೀರು ಸರಬರಾಜು ಒಳಚರಂಡಿ ಮಂಡಳಿಗೆ ವಹಿಸಲಾಗುತ್ತಿದೆ. ಇದಕ್ಕೆ ಖರ್ಚು ಆಗುವ ಹಣವನ್ನು ಬಾಗೇಪಲ್ಲಿ ಪುರಸಭೆ, ಗುಡಿಬಂಡೆ ಮತ್ತು 128 ಹಳ್ಳಿಗಳಿಗೇನು ಜಿಲ್ಲಾ ಪಂಚಾಯಿತಿಯ ಜವಾಬ್ದಾರಿ ಇದೆ, ಜಿಲ್ಲಾ ಪಂಚಾಯಿತಿಯವರು ವಸೂಲಿ ಮಾಡಿ ಕರ್ನಾಟಕ ನಗರ ನೀರು ಸರಬರಾಜು ಒಳಚರಂಡಿ ಮಂಡಳಿಗೆ ಇದನ್ನು ವಹಿಸಿದ್ದಾರೆ.

ಶ್ರೀ ಎನ್. ಸಂಪಂಗಿ: ಉತ್ತರದಲ್ಲಿ 88 ಗ್ರಾಮಗಳು ಎಂದು ಕೊಟ್ಟಿದ್ದಾರೆ. ಇದು 88 ಗ್ರಾಮಗಳೋ ಅಥವಾ 128 ಗ್ರಾಮಗಳೋ?

ಶ್ರೀ ಎಸ್. ಸುರೇಶ್‌ಕುಮಾರ್: 128 ಹಳ್ಳಿಗಳು.

ಶ್ರೀ ಎನ್. ಸಂಪಂಗಿ: 88 ಹಳ್ಳಿಗಳು ಎಂದರೆ ನೀವು ತಪ್ಪು ಮಾಹಿತಿಯನ್ನು ಕೊಡುತ್ತೀರಿ. 128 ಹಳ್ಳಿಗಳಿಗೆ ಈಗ ನೀರನ್ನು ಕೊಡುವುದಕ್ಕೆ ಇರುವುದು.

ಶ್ರೀ ಎಸ್. ಸುರೇಶ್ ಕುಮಾರ್: ನಾನು ಓದಿರುವುದು 128 ಹಳ್ಳಿಗಳು ಎಂದು.

ಶ್ರೀ ಎನ್. ಸಂಪಂಗಿ: ಆದರೆ, ನೀವು ಪ್ರಿಂಟ್ ಮಾಡಿ ಕಳುಹಿಸಿರುವುದು 88 ಹಳ್ಳಿಗಳು ಎಂದು. ಬೆಳಗಾಂ ಅಧಿವೇಶನದಲ್ಲೂ ಇದೇ ಉತ್ತರವನ್ನು ಕೊಟ್ಟಿದ್ದಾರೆ. ನೀವು ಬೇಕಾದರೆ ತರಿಸಿ ನೋಡಿ. ಅದರಲ್ಲಿ ಏನೂ ವ್ಯತ್ಯಾಸವಿಲ್ಲ. ಮಂತ್ರಿಗಳಿಗೆ ಇಂಥ ವಿಚಾರ ಬಂದಾಗ ಅದೇ ಉತ್ತರವನ್ನು ಕೊಡುತ್ತಾರೆ. ದಿನಾಂಕ ಮಾತ್ರ ಬದಲಾವಣೆ ಮಾಡಿಕೊಡುತ್ತಾರೆ. ನಾನು ಕೇಳಿರುವುದೇನೆಂದರೆ, ಕರ್ನಾಟಕ ನೀರು ಸರಬರಾಜು ಒಳಚರಂಡಿ ಮಂಡಳಿಯಿಂದ ಚಿತ್ರಾವತಿ ಬ್ಯಾರೇಜ್‌ನ್ನು ನಿರ್ಮಾಣ ಮಾಡಿದಿರಿ. ಅದಕ್ಕೆ ಯಾವುದೇ ರೀತಿಯ ಬಂದೂಬಸ್ತ್ ಮಾಡಿಲ್ಲ. ಅಲ್ಲಿ ಅವ್ಯವಸ್ಥೆಯಾಗಿದೆ. ಅಲ್ಲಿ ಯಾವುದೇ ಸೂಕ್ತವಾದ ರಕ್ಷಣೆ

ಇಲ್ಲ. ಇವರು ಆ ಶುದ್ಧೀಕರಣ ಘಟಕದವರೆಗೆ ಮಾತ್ರ ಮಾಡಿ ಬಿಟ್ಟಿದ್ದಾರೆ. ಶುದ್ಧೀಕರಣ ಆಗಿರುವ ನೀರನ್ನು ಇವರು ಪಟ್ಟಣಕ್ಕೆ ಕೊಡುತ್ತಿಲ್ಲ. ಆ ಪಟ್ಟಣಕ್ಕೆ ಕೊಡುವುದಿಲ್ಲವೇ ಎಂದರೆ ಇವರಿಗೆ ಸಂಬಂಧ ಇಲ್ಲವೆಂದು ಹೇಳುತ್ತಾರೆ. ನಾನು ಪ್ರಶ್ನೆಯಲ್ಲಿ ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮೂಲಕ ನೀರನ್ನು ಕೊಡತಕ್ಕದ್ದೆಂದು ಹೇಳಿದ್ದೇನೆ. ಏಕೆಂದರೆ ಅದು ಇವರೊಬ್ಬರ ಆಸ್ತಿಯಾಗಿಲ್ಲ. ಅದು ಪಂಚಾಯತ್‌ರಾಜ್ ಇಲಾಖೆಗೂ ಸಂಬಂಧಪಡುತ್ತದೆ. 128 ಹಳ್ಳಿಗಳು ಬರುತ್ತದೆ. ಆ ಹಳ್ಳಿಗಳಿಗೆ ಶುದ್ಧಘಟಕದ ನೀರನ್ನು ಪಂಚಾಯತ್‌ರಾಜ್ ಇಲಾಖೆಯವರು ಕೊಡಬೇಕು. ಆ ಇಲಾಖೆಯವರ ಗಮವನನ್ನೂ ಇದರಲ್ಲಿ ಸೆಳೆಯಬೇಕು. ಇವರೊಬ್ಬರದ್ದೇ ಅಲ್ಲ. ಇದು ಕೇವಲ ಪಟ್ಟಣಕ್ಕೆ.

ಅಧ್ಯಕ್ಷರು: ಅದರ ಬಗ್ಗೆ ಪ್ರತ್ಯೇಕವಾಗಿ ತನ್ನಿ.

ಶ್ರೀ ಎನ್. ಸಂಪಂಗಿ: ಇವರು 128 ಹಳ್ಳಿಗಳಿಗೆ ನೀರನ್ನು ಕೊಡಬೇಕಾಗಿದೆ.

ಅಧ್ಯಕ್ಷರು: ಅದಕ್ಕೂ ಇದಕ್ಕೂ ಸಂಬಂಧ ಇಲ್ಲ.

ಶ್ರೀ ಎನ್. ಸಂಪಂಗಿ: ಇವತ್ತು ಅವರ ಹತ್ತಿರ ಹಣ ಇಲ್ಲ.

ಅಧ್ಯಕ್ಷರು: ಕ್ಲಾರಿಫಿಕೇಷನ್ ಕೇಳಿ.

ಶ್ರೀ ಎನ್. ಸಂಪಂಗಿ: ನಾನು ಮಾತನಾಡಲಿಕ್ಕೇ ಅವಕಾಶ ಇಲ್ಲವೆಂದರೆ ಹೇಗೆ?

ಅಧ್ಯಕ್ಷರು: ಮಾತನಾಡುವುದಕಲ್ಲಾ. ಕ್ಲಾರಿಫಿಕೇಷನ್ ಕೇಳಿ.

ಶ್ರೀ ಎನ್. ಸಂಪಂಗಿ: ಫ್ಲೋರೈಡ್ ರಹಿತ ನೀರನ್ನು ಕೊಡುತ್ತೇವೆ ಎಂಬ ಉದ್ದೇಶದಿಂದಲೇ ಪರಗೋಡು, ಚಿತ್ರಾವತಿ ಬ್ಯಾರೇಜ್ ಕಟ್ಟಿರುವುದು. ಆದರೆ ಇವರು ಆ ನೀರನ್ನು ಕೊಡುತ್ತಿಲ್ಲ. ಆದರೆ ಇವರು ಆ ಶುದ್ಧ ನೀರನ್ನು ಕೊಡುತ್ತಿಲ್ಲ. ನಮ್ಮ ಪಂಚಾಯತ್ ರಾಜ್ ಮಂತ್ರಿಗಳು ಇಲ್ಲೇ ಕುಳಿತಿದ್ದಾರೆ. ಅವರಿಗೂ ಕೂಡ ಇದು ಸಂಬಂಧಪಟ್ಟಿದೆ.

ಅಧ್ಯಕ್ಷರು : ನೀವು ಈ ಬಗ್ಗೆ ಅವರ ಗಮನವನ್ನು ಪ್ರತ್ಯೇಕವಾಗಿ ಸೆಳೆಯಿರಿ.

ಶ್ರೀ ಎನ್. ಸಂಪಂಗಿ : 128 ಹಳ್ಳಿಗಳಲ್ಲಿ ನೀರನ್ನು ಕೊಡತಕ್ಕದ್ದು....

ಅಧ್ಯಕ್ಷರು : ನೀವು ಆ ಬಗ್ಗೆ ಪ್ರತ್ಯೇಕವಾಗಿ ಕೇಳಬೇಕು.

ಶ್ರೀ ಎನ್. ಸಂಪಂಗಿ : ಅದಕ್ಕಾಗಿಯೇ ನಾನು ಶುದ್ಧ ನೀರನ್ನು ಕೊಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಎಂದು ಪ್ರಶ್ನೆ ಕೇಳುತ್ತಿದ್ದೇನೆ.

ಅಧ್ಯಕ್ಷರು : ನೀವು ಆ ಬಗ್ಗೆ ಪ್ರತ್ಯೇಕವಾಗಿ ಬರೆದು ಕಳುಹಿಸಿ. Please, ಅದನ್ನು ಬೇರೆ ರೀತಿಯಲ್ಲಿ ತನ್ನಿ. ಮಾನ್ಯ ಸಚಿವರು ದಯವಿಟ್ಟು ಉತ್ತರ ಹೇಳಿ.

ಶ್ರೀ ಎಸ್. ಸುರೇಶ್‌ಕುಮಾರ್ : ಸನ್ಮಾನ್ಯ ಸದಸ್ಯರು ಬ್ಯಾರೇಜ್ ಕುಲುಷಿತವಾಗುತ್ತಿದೆ ಎಂಬ ಬಗ್ಗೆ ಪ್ರಶ್ನೆ ಕೇಳಿದ್ದರು. ಬ್ಯಾರೇಜ್ ಅನ್ನು ನಾವು clean ಆಗಿ ಇಡಬೇಕು. ಅದರ ಜವಾಬ್ದಾರಿ ಯಾರದು? ಎಂಬ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಮಾನ್ಯ ಸದಸ್ಯರ ಗಮನ ಸೆಳೆಯುವ ಸೂಚನೆ ಬಹಳ ಸೀಮಿತವಾಗಿದೆ. ಅದಕ್ಕೆ ನಾನು ಹೇಳುವುದು ಏನೆಂದರೆ, ಕರ್ನಾಟಕ ನಗರ ನೀರು ಸರಬರಾಜು ಮಂಡಳಿ ಏನಿದೆ, ಅದು ಇನ್ನು ಮೇಲೆ ಈ ಬ್ಯಾರೇಜ್ ಅನ್ನು ನಿರ್ವಹಣೆ ಮಾಡುತ್ತದೆ, ಅದಕ್ಕೆ ಬೇಕಾಗಿರತಕ್ಕಂಥ ಖರ್ಚನ್ನು ಈ ಮೂರೂ ಸೇರಿ ಕೊಡುತ್ತಾರೆ ಎಂದು ಹೇಳಿದ್ದೇನೆ. 128 ಹಳ್ಳಿಗಳಿಗೆ ನೀರು ಸರಬರಾಜು ಮಾಡುವ ಬಗ್ಗೆ ಮಾನ್ಯ ಸದಸ್ಯರು separate ಆಗಿ ಗಮನ ಸೆಳೆದರೆ, ಅದಕ್ಕೆ separate ಆಗಿ ಉತ್ತರ ಕೊಡಲಾಗುವುದು.

ಅಧ್ಯಕ್ಷರು: ಆಯಿತು.

ಶ್ರೀ ಎನ್. ಸಂಪಂಗಿ : ನಾನು ನನ್ನ ಗಮನ ಸೆಳೆಯುವ ಸೂಚನೆ ಪ್ರಸ್ತಾಪಿಸುವಾಗ, 'ಚಿತ್ರಾವತಿ ನದಿಗೆ ಅಡ್ಡಲಾಗಿ ಪರಗೋಡು ಹತ್ತಿರ ನಿರ್ಮಿಸಿರುವ ಬ್ಯಾರೇಜ್‌ನಿಂದ ಒದಗಿಸಲಾಗುತ್ತಿರುವ ಕುಡಿಯುವ ನೀರಿನ ಗುಣಮಟ್ಟ ಹದಗೆಟ್ಟಿರುವ ಬಗ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರ

ಗಮನ ಸೆಳೆಯುತ್ತೇನೆ' ಎಂದು ಹೇಳಿದ್ದೇನೆ. ಇಬ್ಬರು ಸಚಿವರ ಗಮನವನ್ನೂ ಸಹ ನಾನು ಸೆಳೆದಿದ್ದೇನೆ.

ಅಧ್ಯಕ್ಷರು : ಇಬ್ಬರೂ ಉತ್ತರ ಕೊಡಲಿಕ್ಕಾಗುವುದಿಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್ : ನನಗೆ ಬಂದಿರುವ ಪ್ರಶ್ನೆ ಏನೆಂದರೆ, 'ಚಿತ್ರಾವತಿ ನದಿಗೆ ಅಡ್ಡಲಾಗಿ ಪರಗೋಡು ಹತ್ತಿರ ಬ್ಯಾರೇಜ್ ನಿರ್ಮಿಸಿದ್ದು, ಈ ಬ್ಯಾರೇಜ್ ಕರ್ನಾಟಕ ನಗರ ನೀರು ಸರಬರಾಜು ಮಂಡಳಿಗೆ ಒಳಪಟ್ಟಿರುತ್ತದೆ' ಅದು ಅವರದಲ್ಲ, OK. 'ಈ ಬ್ಯಾರೇಜ್ ಸುತ್ತಮುತ್ತ ತ್ಯಾಜ್ಯ ವಸ್ತುಗಳನ್ನು ಹಾಕಿ, ಸರಿಯಾಗಿ ನಿರ್ವಹಣೆ ಮಾಡದಿರುವುದರಿಂದ ಕುಡಿಯುವ ನೀರಿನ ಗುಣಮಟ್ಟ ಹದಗೆಟ್ಟಿರುವ ಬಗ್ಗೆ' ನೀವು ಗಮನ ಸೆಳೆದಿರುತ್ತೀರಿ. ಬ್ಯಾರೇಜ್ ಇದ್ದರೂ ತೊಂದರೆಯಾಗುತ್ತಿದೆ ಎಂದು ಹೇಳಿದ್ದೀರಿ. ಆ ಬ್ಯಾರೇಜ್ ಅನ್ನು ನಿರ್ವಹಣೆ ಮಾಡುತ್ತೇವೆಂದು ಹೇಳುತ್ತಿದ್ದೇವೆಲ್ಲಾ ? ನೀವು ಇನ್ನೊಂದು ಪ್ರಶ್ನೆ ಕೇಳಬೇಕೆಂದರೆ, ಅದಕ್ಕೆ ಮಾನ್ಯ ಜಗದೀಶ್ ಶೆಟ್ಟರ್‌ರವರಿಂದಲೇ ಉತ್ತರ ಬೇಕೆಂದರೆ, ನೀವು ಆ ಬಗ್ಗೆ ಇನ್ನೊಂದು ಪ್ರಶ್ನೆ ಹಾಕಿ, ಅದಕ್ಕೆ ಅವರು ಉತ್ತರ ಕೊಡುತ್ತಾರೆ.

ಅಧ್ಯಕ್ಷರು : ನೀವು ಈ ಬಗ್ಗೆ ಇನ್ನೊಂದು ಪ್ರತ್ಯೇಕ ಸೂಚನೆ ಕಳುಹಿಸಿಕೊಡಿ. ಇದನ್ನು ಮುಕ್ತಾಯ ಮಾಡೋಣ.

ಶ್ರೀ ಎನ್. ಸಂಪಂಗಿ : ಆಯಿತು. ಈಗ ಇದರ maintenance ಯಾರು ಮಾಡುತ್ತಾರೆ ? Karnataka Urban Water Supplyನವರು.....

ಅಧ್ಯಕ್ಷರು : ಈಗಾಗಲೇ ಆ ಬಗ್ಗೆ ಮಾನ್ಯ ಸಚಿವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಎನ್. ಸಂಪಂಗಿ : ಪುರಸಭೆಯಲ್ಲಿ ಹಣವಿಲ್ಲ. ಇದು ಪುರಸಭೆಗೂ ಬರುತ್ತದೆ. ಇದಕ್ಕೆ ಒಂದಲ್ಲಾ ಒಂದು ರೀತಿಯಲ್ಲಿ ಎಲ್ಲಾ ಇಲಾಖೆಗಳೂ ಸಂಬಂಧಪಟ್ಟಿವೆ.

ಅಧ್ಯಕ್ಷರು : ಆ ಬಗ್ಗೆ ಪ್ರತ್ಯೇಕವಾಗಿ ಕೇಳಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು : ಒಂದು ಬಿಲ್ ಇಂಟ್ರಡ್ಯೂಸ್ ಮಾಡುವುದಿದೆ.